# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 24.10.2011**

## ***ಪಾಲಿಕೆಯ ಉಪ / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) ವಲಯ ಕಛೇರಿಗಳ ಸ್ಥಳಾಂತರ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) ವಲಯ ಕಛೇರಿ ಮತ್ತು ಎಂ.ಜಿ. ರಸ್ತೆಯಲ್ಲಿರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) ವಲಯ ಕಛೇರಿಗಳನ್ನು ಪಾಲಿಕೆಯ ಆಡಳಿತ ಹಿತದೃಷ್ಟಿಯಿಂದ ಈಗ ಈ ಕಛೇರಿಗಳನ್ನು ಶೇಷಾದ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಉದ್ಯಾನವನ (ಫ್ರೀಡಂ ಪಾರ್ಕ್), ಒಂದನೇ ಮಹಡಿ, ಬೆಂಗಳೂರು ಇಲ್ಲಿಗೆ ಸ್ಥಳಾಂತರಿಸಲಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) ವಿಭಾಗ ರವರು ತಿಳಿಸಿರುತ್ತಾರೆ. ಸಂಬಂಧಪಟ್ಟ ಸಾರ್ವಜನಿಕರು ಇನ್ನು ಮುಂದೆ ಸ್ಥಳಾಂತರಗೊಂಡಿರುವ ಕಛೇರಿಗಳನ್ನು ತಮ್ಮ ಕೆಲಸ ಕಾರ್ಯಗಳಿಗೆ ಸಂಪರ್ಕಿಸಲು ಕೋರಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 24.10.2011**

## ***ಪಾಲಿಕೆಯ ಪಿಂಚಣಿದಾರರಿಗೆ ಸೂಚನೆ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಿವೃತ್ತಿ ಪಿಂಚಣಿದಾರರು, ಕುಟುಂಬ ನಿವೃತ್ತಿ ಪಿಂಚಣಿದಾರರು, ಅಂಗವಿಕಲ ಪಿಂಚಣಿದಾರರು ಹಾಗೂ ಅಪ್ರಾಪ್ತ ವಯಸ್ಸಿನ ಪಿಂಚಣಿ ಪಡೆಯುತ್ತಿರುವವರು 2011-12ನೇ ಸಾಲಿನ ಜೀವಿತ ಪ್ರಮಾಣ ಪತ್ರವನ್ನು ನವೆಂಬರ್-2011 ರಿಂದ ಜನವರಿ-2012ರ ಒಳಗೆ ಅವರುಗಳು ಪಿಂಚಣಿ ಪಡೆಯುತ್ತಿರುವ ಬ್ಯಾಂಕುಗಳಲ್ಲಿಯೇ ನವೀಕರಿಸಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ಅವರುಗಳ ಪಿಂಚಣಿಯನ್ನು ಏಪ್ರಿಲ್-2012ನೇ ಮಾಹೆಯಿಂದ ತಡೆಹಿಡಿಯಲಾಗುವುದು. ಪಿಂಚಣಿದಾರರು ಮರಣ ಹೊಂದಿದ ಪಕ್ಷದಲ್ಲಿ ಕೂಡಲೇ ಆಯಾ ಬ್ಯಾಂಕ್‌ಗಳಿಗೆ ಹಾಗೂ ಲೆಕ್ಕಪರಿಶೋಧನಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪಿಂಚಣಿ ಶಾಖೆಗೆ ವರದಿ ನೀಡಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಳಿಗಾಗಿ ಆಯಾ ಬ್ಯಾಂಕ್ ವ್ಯವಸ್ಥಾಪಕರನ್ನು ಅಥವಾ ಲೆಕ್ಕಪರಿಶೋಧನಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪಿಂಚಣಿ ಶಾಖೆ (ದೂರವಾಣಿ: 080-22975522) ಯನ್ನು ಸಂಪರ್ಕಿಸಲು ಸೂಚಿಸಿದೆ.

## ***For the information of BBMP Pensioners***

The renewal of Life Certificates for the year 2011-12 of Bruhat Bangalore Mahanagara Palike Pensioners including Family Pensioners and Minor Pensioners will be renewed from 01.11.2011 to 31.01.2012 at the concerned banks where the pensioners are drawing their pension.

Pensioners are here by directed to renew their Life Certificates during the month of November-2011 to January-2012 failing which their pension will be stopped from April-2012. Incase of death of pensioners, the same should be intimated to the concerned Banks and also to the Audit Officer, Bruhat Bangalore Mahanagara Palike, Pension Section immediately. For further details contact the concerned Bank Managers / Audit Officer, Bruhat Bangalore Mahanagara Palike, Pension Section. (Ph: 080-22975522)

**ಸಾರ್ವಜನಿಕ ಸಂಪರ್ಕಾಧಿಕಾರಿ**